# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ. ಹೆಚ್. ರಸ್ತೆ, ತುಮಕೂರು–572 103 ☏:0816–2255650,2273511 ಫ್ಯಾಕ್ಸ್:0816–2270719


ಸಂಖ್ಯೆ:ತುವಿ:ಪವಿ:2024–25: 344 ದಿನಾಂಕ:03.07.2025

## : ಸುತ್ತೋಲೆ :

ವಿಷಯ : 2025 ರ ಜುಲೈ/ಆಗಸ್ಟ್ ಮಾಹೆಗಳಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಉತ್ತರ ಪತ್ರಿಕೆಗಳನ್ನು ವಿತರಿಸುವುದಕ್ಕೆ ಸಂಬಂಧಿಸಿದ್ದರ ಕುರಿತು.

* * * * *

2024-25 ನೇ ಶೈಕ್ಷಣಿಕ ಸಾಲಿನ 2025 ರ ಜುಲೈ/ಆಗಸ್ಟ್ ಮಾಹೆಗಳಲ್ಲಿ ನಡೆಯಲಿರುವ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅಗತ್ಯಕ್ಕೆ ತಕ್ಕಂತೆ 36 (ಮೂವತ್ತಾರು) ಪುಟಗಳುಳ್ಳ ಉತ್ತರ ಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ನೀಡುವುದು. ಮುಂದುವರೆದು 36 (ಮೂವತ್ತಾರು) ಪುಟಗಳುಳ್ಳ ಉತ್ತರ ಪತ್ರಿಕೆಗಳು ತಮ್ಮ ಪರೀಕ್ಷಾ ಕೇಂದ್ರದ ದಾಸ್ತಾನಿನಲ್ಲಿ ಖಾಲಿಯಾದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಹಾಗೂ ಎಲ್ಲಾ ವಿಷಯಗಳಿಗೂ 24 (ಇಪ್ಪತ್ನಾಲ್ಕು) ಪುಟಗಳುಳ್ಳ ಉತ್ತರ ಪತ್ರಿಕೆಗಳನ್ನೇ ವಿತರಿಸುವುದು. ಒಂದೊಮ್ಮೆ ಯಾವುದಾದರೂ ವಿದ್ಯಾರ್ಥಿಯು ಹೆಚ್ಚುವರಿ ಉತ್ತರ ಪತ್ರಿಕೆ ನೀಡುವಂತೆ ಕೋರಿದಲ್ಲಿ ಸದರಿ ವಿದ್ಯಾರ್ಥಿಗೆ ಮತ್ತೊಂದು 24 (ಇಪ್ಪತ್ನಾಲ್ಕು) ಪುಟಗಳುಳ್ಳ ಉತ್ತರ ಪತ್ರಿಕೆಯನ್ನು ನೀಡಿ ಅದರ ಸಂಖ್ಯೆಯನ್ನು ಕಡ್ಡಾಯವಾಗಿ ಹಾಜರಾತಿ ಹಾಳೆಯಲ್ಲಿ (Attendance Sheet) ನಮೂದಿಸತಕ್ಕದ್ದು. ಮೊದಲು ನೀಡಿದ ಉತ್ತರ ಪತ್ರಿಕೆಯೊಂದಿಗೆ ಹೆಚ್ಚುವರಿ ಉತ್ತರ ಪತ್ರಿಕೆಯನ್ನು ಸರಿಯಾಗಿ ದಾರದೊಂದಿಗೆ ಜೋಡಣೆ ಮಾಡಿ ಕ್ರಮಬದ್ಧವಾಗಿ ತಮ್ಮ ಪರೀಕ್ಷಾ ಕೇಂದ್ರದಲ್ಲಿನ ಎಲ್ಲಾ ಉತ್ತರ ಪತ್ರಿಕೆಗಳನ್ನು ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಉತ್ತರ ಪತ್ರಿಕೆಗಳ ಬಂಡಲ್ ಸ್ವೀಕರಣೆ ಮತ್ತು ಕೋಡಿಂಗ್ ಘಟಕಕ್ಕೆ ಜಾಗೃತದಳದ ಸಿಬ್ಬಂದಿಯ ಮುಖಾಂತರ ರವಾನಿಸತಕ್ಕದ್ದು.

3/7/25

ಕುಲಸಚಿವರು(ಪರೀಕ್ಷಾಂಗ)

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರು / ಪರೀಕ್ಷಾ ಮುಖ್ಯ ಅಧೀಕ್ಷಕರುಗಳು, ಎಲ್ಲಾ ಸ್ನಾತಕ ಪದವಿ ಪರೀಕ್ಷಾ ಕೇಂದ್ರಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು :

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – **ಇಂದೇ ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು.**
5. ಫಲಿತಾಂಶ ಗಣಕೀಕರಣ ವಿಭಾಗ, ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಕಛೇರಿ ಪ್ರತಿ.